## ಪ್ರತಿಭಾ ನವನವೋನ್ಮೇಶಶಾಲಿನಿ...

ಭಾರತೀಯ ಕಾವ್ಯಮೀಮಾಂಸೆಯ 'ಪ್ರತಿಭಾ ನವನವೋನ್ಮೇಶಶಾಲಿನಿ' ಎನ್ನುವ ಮಾತು ಕವಯಿತ್ರಿ ಪ್ರತಿಭಾ ನಂದಕುಮಾರ್ ಅವರಿಗೂ ಹೊಂದುವಂತಹದ್ದು. ತಮ್ಮ ಕವಿತೆಯ ಮೂಲಕ ಸಹೃದಯರನ್ನು ಸದಾ ನಿಬ್ಬೆರಗಾಗಿಸುವ ಪ್ರತಿಭಾ, ಓದುಗರನ್ನು ಬೆಚ್ಚಿಬೀಳಿಸುವುದನ್ನೂ ಕೂಡ ಬರಹದ ಮಟ್ಟಿಗೆ ಒಂದು 'ಗುಣ'ವನ್ನಾಗಿ ದುಡಿಸಿಕೊಂಡವರು. ಈ ಬಗೆಯ ಪ್ರತಿಭಾ ವಿಲಾಸ ಈಗ ಕನ್ನಡ ಸಿನಿಮಾದಲ್ಲಿ ಅಭಿವ್ಯಕ್ತಗೊಳ್ಳುವ ಪ್ರಯತ್ನದಲ್ಲಿದೆ; 'ಸ್ನೇಕ್ ನಾಗ' ಸಿನಿಮಾದ ಮೂಲಕ.

ನಿರ್ದೇಶಕಿಯಾಗಿ ಕನ್ನಡ ಚಿತ್ರರಂಗದಲ್ಲಿ ಪ್ರತಿಭಾ ಅವರದಿದು ಮೊದಲ ರಂಗಪ್ರವೇಶವಾದರೂ ಸಿನಿಮಾ ಅನುಭವ ಅವರಿಗೆ ಹೊಸತೇನಲ್ಲ. ಕಳೆದ ಐದಾರು ವರ್ಷಗಳಿಂದ ತಮಿಳು ಚಿತ್ರರಂಗದಲ್ಲಿ ನಿರ್ದೇಶನದ ಪಟ್ಟುಗಳ ಕಲಿಕೆಯಲ್ಲಿ ತೊಡಗಿ ಕೊಂಡಿದ್ದ ಅವರು, 'ಅದೇನು ಮಾಡುವುದಿದ್ದರೂ ಕನ್ನಡದಲ್ಲೇ ಮಾಡಿ, ಬನ್ನಿ' ಎನ್ನುವ ಯೋಗರಾಜ ಭಟ್‌ರ ಆಹ್ವಾನವನ್ನು ಮನ್ನಿಸಿ 'ಸ್ನೇಕ್ ನಾಗ'ದಲ್ಲಿ ತೊಡಗಿಕೊಂಡಿದ್ದಾರೆ. ಹಿರಿಯ ಕಥೆಗಾರ್ತಿ ಉಮಾರಾವ್ ಅವರ 'ಹಾವಾಡಿಗ' ಕಥನವನ್ನು ಪ್ರತಿಭಾ ತಮ್ಮ ಚಿತ್ರಕ್ಕೆ ಒಗ್ಗಿಸಿಕೊಂಡಿದ್ದಾರೆ.

ಚೊಚ್ಚಿಲ ಚಿತ್ರಕ್ಕೆ ಪ್ರತಿಭಾ ಅವರು ಕಲೆ ಹಾಕಿರುವ ಕಲಾವಿದರ ಬಳಗ ಸೊಗಸಾಗಿದೆ. ಎಂಥ ಪಾತ್ರಕ್ಕೂ ಒಗ್ಗುವ ಯೋಗಿ ಚಿತ್ರದ ನಾಯಕ. ಸಿಹಿಕಹಿ ಚಂದ್ರು–ಗೀತಾ ದಂಪತಿಯ ಪುತ್ರಿ ಹಿತಾ ಚಿತ್ರದ ನಾಯಕಿ. ಗಿರೀಶ ಕಾರ್ನಾಡ್ ಪ್ರಮುಖ ಪಾತ್ರವೊಂದರಲ್ಲಿ ನಟಿಸುತ್ತಿರುವುದು ಸಿನಿಮಾದ ವಿಶೇಷಗಳಲ್ಲೊಂದು. ಪ್ರತಿಭಾ ಅವರ ಮೇಲಿನ ಪ್ರೀತಿಯ ಕಾರಣದಿಂದಾಗಿ ಕಾರ್ನಾಡ್ ಈ ಪಾತ್ರವನ್ನು ಒಪ್ಪಿಕೊಂಡರಂತೆ. ವೀರ ಸಮರ್ಥ್ ಅವರ ಸಂಗೀತ ಹಾಗೂ ಹಿರಿಯ ಪತ್ರಕರ್ತೆ ಡಾ. ವಿಜಯಾ ಅವರ ಮೊಮ್ಮಗ ಅದ್ವೈತ್ ಛಾಯಾಗ್ರಹಣ ಚಿತ್ರಕ್ಕಿದೆ.





## ಸಿಹಿಯಾಗಿ 'ಹಿತ'ವಾಗಿ

'ಯೋಗರಾಜ ಭಟ್ಟರ ಸಿನಿಮಾಗಳಲ್ಲಿ ನಟಿಸಬೇಕೆನ್ನುವುದು ನನ್ನ ಕನಸಾಗಿತ್ತು. ಅದೀಗ ಭಟ್ಟರ ನಿರ್ಮಾಣದ ಸಿನಿಮಾದಲ್ಲಿ ನಟಿಸುವ ಮೂಲಕ ನನಸಾಗುತ್ತಿದೆ' ಎಂದರು ಹಿತಾ ಚಂದ್ರಶೇಖರ್. 'ಸ್ನೇಕ್ ನಾಗ' ಚಿತ್ರದ ಮೂಲಕ ನಾಯಕಿಯಾಗಿ ಕನ್ನಡ ಚಿತ್ರರಂಗ ಪ್ರವೇಶಿಸುತ್ತಿರುವ ಅವರ ಮಾತುಗಳಲ್ಲಿ ಕಂಪನವೇನೂ ಇದ್ದಂತಿರಲಿಲ್ಲ. ಆದರೆ, ಮಗಳಿಗಿಂತಲೂ ಹೆಚ್ಚು ನರ್ವಸ್ ಆಗಿದ್ದವರು ಸಿಹಿಕಹಿ ಚಂದ್ರು.

ತಮ್ಮ ಮಗಳು ಬೆಳ್ಳಿತೆರೆ ಪ್ರವೇಶಿಸಬೇಕು ಎನ್ನುವ ಆಸೆ ಚಂದ್ರು ಮತ್ತು ಗೀತಾ ದಂಪತಿಗೆ ಮೊದಲಿನಿಂದಲೂ ಇತ್ತು. ಆ ಹಂಬಲ ಈಡೇರಿದ ಸಂದರ್ಭ ಸಹಜವಾಗಿಯೇ ಅವರಿಗೆ ಖುಷಿ ತಂದಿದೆ. ಆದರೆ, ಮಕ್ಕಳ ಬದುಕಿನ ಸಂಕ್ರಮಣದ ಸನ್ನಿವೇಶಗಳು ಹೆತ್ತವರಲ್ಲಿ ಆತಂಕವನ್ನು ಉಂಟು ಮಾಡುವುದೂ ಸಹಜವಷ್ಟೆ! ಹೀಗಿದ್ದರೂ 'ಭಟ್ಟರು ಮತ್ತು ಪ್ರತಿಭಾ ಅವರ ಗರಡಿಯೊಳಗೆ ತಮ್ಮ ಮಗಳು ಸುರಕ್ಷಿತ' ಎನ್ನುವ ಭಾವನೆ ಅವರದು.

ಸಿನಿಮಾ ಪ್ರವೇಶಿಸುವ ಮುನ್ನ ಹಿತಾ ತಕ್ಕಮಟ್ಟಿಗೆ ಸಿದ್ಧತೆಯನ್ನೂ ನಡೆಸಿದ್ದಾರೆ. ಮುಂಬಯಿಯ ರೋಷನ್ ತನೇಜಾ ಇನ್‌ಸ್ಟಿಟ್ಯೂಟ್‌ನಲ್ಲಿ ಅವರು ನಟನೆಯ ಪಾಠಗಳನ್ನು ಕಲಿತಿದ್ದಾರೆ. 'ಸ್ನೇಕ್ ನಾಗ' ಮೂಲಕ ಕನ್ನಡ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳುವ ಹಂಬಲ ಅವರದು.

■ ರಘು